# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,-1568/2018/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 29/01/2020

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಬಾಸ್ಕರ್ ಪೂಜಾರಿಯವರು ಕೋಳಿ ಸಾಕಾಣಿಕಾ ಘಟಕ ನಿರ್ವಹಣೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಂ. ಪಿಸಿಬಿ 744 ಸಿಓಸಿ 2015-16/4928 ದಿನಾಂಕ 03.12.2015 ರ ಸುತ್ತೋಲೆಯ ಮಾರ್ಗಸೂಚಿಯ ಷರತ್ತನ್ನು ಉಲ್ಲಂಘನೆ ಮಾಡಿದ್ದರಿಂದ ಹಾಗೂ ಪರಿಸರದಲ್ಲಿ ಕೋಳಿಗಳ ತ್ಯಾಜ್ಯ (ಹಿಕ್ಕೆ ಮತ್ತು ವಿಸರ್ಜನೆ) ದುರ್ವಾಸನೆ ಬೀರಿ ಪರಿಸರದ ವಾಸಿಗಳಿಗೆ ಉಪದ್ರವ ಉಂಟಾಗುವ ಸಾಧ್ಯತೆ ಇರುತ್ತದೆ ಎನ್ನುವ ವರದಿಯನ್ನು ಪರಿಸರ ಅಧಿಕಾರಿಗಳು ನೀಡಿರುವುದರಿಂದ ಸದರಿಯವರ ಕೋಳಿ ಸಾಕಾಣಿಕೆ ಘಟಕವನ್ನು ತ್ವರಿತವಾಗಿ ತೆರವುಗೊಳಿಸಲು ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀಮತಿ ದಮಯಂತಿ ನಾಯಕ್ ಕೋಂ ನಾರಾಯಣ್ ನಾಯಕ್, ಕಾಪೂಮನಿ, ಕೋಡಿಂಬಾಡಿ ಗ್ರಾಮ, ಪುತ್ತೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೋಡಿಂಬಾಡಿ ಗ್ರಾಮ ಪಂಚಾಯತ್, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಮತ್ತು, (2) ಆರೋಗ್ಯಾಧಿಕಾರಿ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ದೂರುದಾರರು ಮತ್ತು ಇನ್ನೂ ಆರೇಳು ಜನ ಕಾಪೂಮನಿ ಪರಿಸರದಲ್ಲಿ ಕುಟುಂಬ ಸಮೇತ ವಾಸವಿರುತ್ತಾರೆ. ಸದರಿ ವಸತಿ ಪರಿಸರದಲ್ಲಿ ಶ್ರೀ ಭಾಸ್ಕರ್ ಪೂಜಾರಿ ಎನ್ನುವವರು ದೊಡ್ಡ ಪ್ರಮಾಣದಲ್ಲಿ ಕೋಳಿ ಫಾರಂ ಉದ್ದಿಮೆ ನಡೆಸುತ್ತಿದ್ದು, ಸದರಿ ಫಾರಂನಿಂದ

ಉತ್ಪನ್ನವಾಗುವ ತ್ಯಾಜ್ಯ, ಕೊಳೆ-ಕಶ್ಮಲಗಳನ್ನು ಪರಿಸರದಲ್ಲಿ ಹರಿಸಿ ಪರಿಸರ ಮಾಲಿನ್ಯಕ್ಕೆ ಕಾರಣ ಕರ್ತರಾಗಿರುತ್ತಾರೆ. ಸದರಿ ವಸತಿ ಪ್ರದೇಶದಲ್ಲಿ ನೆಮ್ಮದಿಯ ಬದುಕಿಗೆ ಅಗತ್ಯವಿರುವ ಆರೋಗ್ಯದಾಯಕ ವಾತಾವರಣ ಇರುವುದಿಲ್ಲ. ಈ ಬಗ್ಗೆ ಎದುರುದಾರರಿಗೆ ಕೋಳಿ ಫಾರಂ ಮಾಲೀಕರ ವಿರುದ್ಧ ಶುಚಿತ್ವ ನೈರ್ಮಲ್ಯ ಕಾಪಾಡಲು ಮತ್ತು ಪರಿಸರ ಸಂರಕ್ಷಣಾ ವ್ಯವಸ್ಥೆಯನ್ನು ಮಾಡಲು ಹಾಗೂ ಅಸಹನೀಯವಾದ ದುರ್ವಾಸನೆಯನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳಲು ಅರ್ಜಿ ಸಲ್ಲಿಸಿದರೂ ಎದುರುದಾರರು ನಿರ್ಲಕ್ಷತನವನ್ನು ತೋರಿ ಕೋಳಿ ಫಾರಂ ಮಾಲೀಕನ ವಿರುದ್ಧ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ವಸತಿ ಪ್ರದೇಶದಲ್ಲಿ ಅಕ್ರಮವಾಗಿ ನಡೆಸುತ್ತಿರುವ ಕೋಳಿ ಫಾರಂನ್ನು ಸಂಪೂರ್ಣ ತೆರವುಗೊಳಿಸಲು ಸೂಚನೆ ನೀಡಬೇಕೆಂದು ಕೋರಿಕೊಂಡಿರುತ್ತಾರೆ.

3. ದೂರಿನ ಜೊತೆಗೆ 1 ಮತ್ತು 2ನೇ ಅರ್ಜಿದಾರರಿಗೆ ಕೋಳಿ ಫಾರಂನಿಂದ ಆಗುತ್ತಿರುವ ಪರಿಸರ ಮಾಲಿನ್ಯದ ಬಗ್ಗೆ ಹೇಳಿ ಸದರಿ ಕೋಳಿ ಫಾರಂನ್ನು ಸ್ಥಳಾಂತರಿಸಬೇಕೆಂದು ಕೋರಿ ಸಲ್ಲಿಸಿದ ಅರ್ಜಿಗಳ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

4. ಎದುರುದಾರರಿಗೆ ಆಕ್ಷೇಪಣೆ ಕೇಳಲಾಗಿ, ಎದುರುದಾರರು ಆಕ್ಷೇಪಣೆಗಳನ್ನು ದಾಖಲೆಗಳೊಂದಿಗೆ ಸಲ್ಲಿಸಿ ಕೋಳಿ ಫಾರಂ ನಡೆಸುತ್ತಿರುವ ಶ್ರೀ ಭಾಸ್ಕರ್ ಪೂಜಾರಿ ಕಾಪು ಮನೆ ರವರಿಗೆ ಕೋಳಿ ಫಾರಂ ನಡೆಸುವುದಕ್ಕೆ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ನಿರ್ಣಯ ನಂ. 196/2011-12, ದಿನಾಂಕ: 06/07/2012 ರಂದು ಮಂಜೂರುಗೊಳಿಸಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿ, ಕಟ್ಟಡ ಪೂರ್ಣಗೊಂಡ ನಂತರ ನಂ. II-324/1 ಅಂತಾ ನೀಡಲಾಗಿದ್ದು, ಅಲ್ಲದೇ ಮಾಲಿನ್ಯ ನಿಯಂತ್ರಣ ಮಂಡಳಿ ಮಂಗಳೂರು, ಆಡಳಿತ ವೈದ್ಯಾಧಿಕಾರಿ, ಸಮುದಾಯ ಆರೋಗ್ಯ ಕೇಂದ್ರ, ಉಪ್ಪಿನಂಗಡಿ, ಪಶುವೈದ್ಯಾಧಿಕಾರಿ, ಸಂಚಾರಿ ಪಶು ಚಿಕಿತ್ಸಾಲಯ ದಕ್ಷಿಣ ಕನ್ನಡ ಇವರಿಂದ ಅಭಿಪ್ರಾಯ ಪಡೆದು ದಿನಾಂಕ: 31/07/2012 ರಂದು ಆಕ್ಷೇಪಣೆ ಆಹವಾಲಿಸಿ, ನೋಟಿಸ್ ನೀಡಿ ಅವಶ್ಯಕ ಲಭ್ಯ ದಾಖಲೆಗಳನ್ನು ಪರಿಶೀಲಿಸಿ ಶ್ರೀ ಬಾಸ್ಕರ್ ಪೂಜಾರಿ ರವರಿಗೆ ದಿನಾಂಕ: 07/08/2012 ರಂದು ಪರವಾನಗಿ ನೀಡಲಾಗಿದೆ. ದೂರುದಾರರು ಆಪಾದಿಸಿದಂತೆ ಕೋಳಿ ಫಾರಂ ಪರಿಶೀಲನೆ ಸಮಯದಲ್ಲಿ ಪರಿಸರಕ್ಕೆ ಹಾನಿಯಾಗಿದ್ದು ಕಂಡುಬಂದಿಲ್ಲ, ಈ ಬಗ್ಗೆ ದೂರುದಾರರಿಗೆ ಮನವರಿಕೆ ಮಾಡಲಾಗಿದೆ. ಶ್ರೀ ಭಾಸ್ಕರ್ ಪೂಜಾರಿ ಕೋಳಿ ಫಾರಂ ಪ್ರಾರಂಭಿಸುವ ಮೊದಲು ಮಾಲಿನ್ಯ

ನಿಯಂತ್ರಣ ಮಂಡಳಿ, ಮಂಗಳೂರು ಇವರಿಂದ ಅಭಿಪ್ರಾಯ ಪಡೆಯಲಾಗಿದ್ದು, ಮಾಲಿನ್ಯ ನಿಯಂತ್ರ ಮಂಡಳಿ ರವರ ಪತ್ರ ಸಂಖ್ಯೆ: 194/2018-19, ದಿನಾಂಕ: 24/04/2018ರ ಪತ್ರ ಪರಿಶೀಲಿಸಿದ್ದು, ಚುನಾವಣಾ ಸಮಯದಲ್ಲಿ ಪಂಚಾಯತ್ ಸಭೆಯಲ್ಲಿ ಮಂಡಿಸಲಾಗಿಲ್ಲ. ಕೋಳಿ ಫಾರಂ ಮಾಲೀಕರಿಗೆ ಪ್ರಾರಂಭದ ಹಂತದಲ್ಲಿ ದೂರುದಾರರೇ ಸಹಕರಿಸಿದ್ದಾರೆ, ತಾನು ಯಾವುದೇ ರೀತಿಯಿಂದ ಕರ್ತವ್ಯ ಲೋಪ ಎಸಗಿಲ್ಲವೆಂದು ದೂರುದಾರರು ತಮ್ಮ ಆಕ್ಷೇಪಣೆಗಳಲ್ಲಿ ತಿಳಿಸಿದ್ದಾರೆ.

5. ಎದುರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಶ್ರೀ ಭಾಸ್ಕರ್ ಪೂಜಾರಿ ರವರಿಗೆ ದಿನಾಂಕ: 27/07/2012 ರಂದು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಮಂಗಳೂರು ರವರು ಅನುಮತಿ ನೀಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ದೂರುದಾರರಿಗೆ ಪ್ರತ್ಯುತ್ತರ ಕೇಳಲಾಗಿ, ಪ್ರತ್ಯುತ್ತರ ಸಲ್ಲಿಸಿ, ಆಕ್ಷೇಪಣೆಗಳಲ್ಲಿರುವ ಸಂಗತಿಗಳನ್ನು ನಿರಾಕರಿಸಿದ್ದಾರೆ. ಅಲ್ಲದೇ, ಕೋಳಿ ಫಾರಂ ಪುತ್ತೂರು ಉಪ್ಪಿನಂಗಡಿಯ ರಾಜ್ಯ ರಸ್ತೆಯಿಂದ ಕೇವಲ 25 ಮೀಟರ್ ಕಡಿಮೆ ಅಂತರದಲ್ಲಿದ್ದು, ಸದರಿ ಕೋಳಿ ಫಾರಂ ಕಟ್ಟಡವು ಫಿರ್ಯಾದುದರರ ಮನೆಯಿಂದ 30 ಮೀಟರ್ ಅಂತರದಲ್ಲಿದೆ, ಆದ್ದರಿಂದ ಜನ ವಸತಿ ಪ್ರದೇಶದಲ್ಲಿ ಕೋಳಿ ಫಾರಂ ಇಡಿಸುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲವೆಂದು ತಿಳಿಸಿದ್ದಾರೆ.

6. ದೂರುದಾರರು ಮತ್ತು ಎದುರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಶ್ರೀ ಭಾಸ್ಕರ್ ಪೂಜಾರಿ ರವರಿಗೆ ಕೋಳಿ ಫಾರಂ ಮಾಡಲು ದಿನಾಂಕ: 24/02/2012 ರಂದು ಪರವಾನಿಗೆ ನೀಡಿದ್ದಾರೆ, ಅದರಲ್ಲಿ ಷರತ್ತುಗಳನ್ನು ಸಹಿತ ವಿಧಿಸಿದ್ದಾರೆ, ಸದರಿ ಷರತ್ತುಗಳಲ್ಲಿ ಪ್ರಮುಖವಾಗಿ ಸರ್ಕಾರದ ಆದೇಶದ ರೀತ್ಯಾ ಧ್ರವ ಹಾಗೂ ತ್ಯಾಜ್ಯ ವಿಲೇವಾರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸತಕ್ಕದ್ದು ಎಂದು ಇರುತ್ತದೆ. ಆದರೆ, ದೂರುದಾರರು ಸದರಿ ಕೋಳಿ ಫಾರಂನಿಂದಾಗಿ ಸುತ್ತಮುತ್ತಲಿನ ಪರಿಸರ ಹಾಳಾಗಿ ತಮಗೆ ಉಪದ್ರವ ಆಗುತ್ತಿದೆಯೆಂದು ಆಪಾದಿಸಿದ್ದಾರೆ. ಇದರಿಂದ ಕಟ್ಟಡ ಪರವಾನಗಿ ಕಾಲಕ್ಕೆ ಹಾಕಿರುವ ಷರತ್ತುಗಳನ್ನು ಶ್ರೀ ಭಾಸ್ಕರ್ ಪೂಜಾರಿ ರವರು ಪಾಲನೆ ಮಾಡುತ್ತಿದ್ದಾರೆಯೇ ಎಂಬುದು ಪ್ರಶ್ನಾರ್ಹವಾಗುತ್ತದೆ.

7. ಪಶು ವೈದ್ಯಾಧಿಕಾರಿಗಳು ದಿನಾಂಕ: 30/07/2017 ರಂದು ಕೆಂಬಾಡಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟ ಸರ್ವೆ ನಂ. 88/1ಪಿ1 ಕಟ್ಟಡ ನಂ. II 324/1 ರಲ್ಲಿ ಕಟ್ಟಿರುವ ಕಟ್ಟಡದಲ್ಲಿ ಕೋಳಿ

ಸಾಕಾಣಿಕೆಗೆ ಶ್ರೀ ಭಾಸ್ಕರ್ ಪೂಜಾರಿ ರವರಿಗೆ ಅಗತ್ಯ ಪರವಾನಗಿ ನೀಡಲು ಶಿಫಾರಸ್ಸು ಮಾಡಲಾಗಿದೆ ಎಂದು ದೃಢೀಕರಣ ನೀಡಿದ್ದಾರೆ. ಅದರಂತೆ ಆಡಳಿತ ವೈದ್ಯಾಧಿಕಾರಿ ಸಮುದಾಯ ಆರೋಗ್ಯ ಕೇಂದ್ರ, ಉಪ್ಪಿನಂಗಡಿ, ದ.ಕ. ರವರು ದಿನಾಂಕ: 30/06/2012 ರಂದು ಕೆಂಬಾಡಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟ ಸರ್ವೆ ನಂ. 88/1ಪಿ1 ಕಟ್ಟಡ ನಂ. II 324/1 ರಲ್ಲಿ ಕಟ್ಟಿರುವ ಕಟ್ಟಡದಲ್ಲಿ ಕೋಳಿ ವ್ಯಾಪಾರ ಮಾಡಲು ಉದ್ದೇಶಿಸಿರುವ ಶ್ರೀ ಭಾಸ್ಕರ್ ಪೂಜಾರಿ ರವರಿಗೆ ಅಗತ್ಯ ಪರವಾನಗಿ ನೀಡಲು ಶಿಫಾರಸ್ಸು ಮಾಡಲಾಗಿದೆ ಎಂದು ದೃಢೀಕರಣ ನೀಡಿದ್ದಾರೆ.

8. ಪಶು ವೈದ್ಯಾಧಿಕಾರಿಗಳು ಹಾಗೂ ಆಡಳಿತ ವೈದ್ಯಾಧಿಕಾರಿ ಸಮುದಾಯ ಆರೋಗ್ಯ ಕೇಂದ್ರ, ಉಪ್ಪಿನಂಗಡಿ, ದ.ಕ. ರವರು ದೃಢೀಕರಣ ಪತ್ರ ಎಂದು ಕೈಬರವಣಿಗೆಯಲ್ಲಿ ನೀಡಿರುವ ದಾಖಲೆಯನ್ನು ಹೊರತುಪಡಿಸಿ ಸದರಿ ದೃಢೀಕರಣ ನೀಡಲು ಯಾವ ಮಾನದಂಡಗಳನ್ನು ಅನುಸರಿಸಬೇಕು ಎನ್ನುವ ಅಥವಾ ಯಾವ ಷರತ್ತುಗಳ ಮೇರೆಗೆ ಅಗತ್ಯ ಪರವಾನಿಗೆ ನೀಡಬೇಕು ಎನ್ನುವ ಬಗ್ಗೆ ದೃಢೀಕರಣ ನೀಡಿದ್ದಾರೆ ಎನ್ನುವ ಬಗ್ಗೆ ಸ್ಪಷ್ಟನೆ ಇಲ್ಲ.

9. ದಿನಾಂಕ: 27/07/2012 ರಂದು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಪರಿಸರ ಭವನ, ಬೈಕಂಪಾಡಿ ಕೈಗಾರಿಕಾ ಪ್ರದೇಶ, ಮಂಗಳೂರು ರವರು ನೀಡಿರುವ ನಿರಾಪೇಕ್ಷಣಾ ಪತ್ರವನ್ನು ಪರಿಶೀಲಿಸಲಾಗಿ, ಅವರು ಷರತ್ತುಗಳ ಮೇರೆಗೆ ನೀಡಿದ್ದಾರೆ, ಅದರಲ್ಲಿಯ ಪ್ರಮುಖ ಷರತ್ತುಗಳು

(1) This consent (Read NOC) is related only to the pollution aspects of the said project with respect to the said location. This consent is no way is construed to give any right, in any nature, to the applicant whatsoever, in this regard.
(2) The Poultry farm company shall not undertake expansion/diversification/ modernization change of location of site etc., without the prior clearance from this Board.
(3) This consent issued for only establishment of Poultry farm only.
(4) The Poultry farm shall take a forestation measures in the factory area, so that greet belt around the factory premises is maintained.
(5) The Poultry farm shall comply with conditions stipulated by all regulatory authorities.
(6) The Industry Authorities shall create storm water harvesting facilities in the industry and submit report to the Board.

(7) **There shall not be any smell nuisance from the poultry activity.**

(8) **If any complaint received from neighbors against smell nuisance and it is in proven, then the applicant shall stop poultry activity.**

10. ಮೇಲೆ ಉಲ್ಲೇಖಿಸಿರುವ ಷರತ್ತು 7 ಮತ್ತು 8ನ್ನು ಪರಿಶೀಲಿಸಲಾಗಿ, ಕೋಳಿ ಸಾಕಾಣಿಕೆಯಿಂದ ಯಾವುದೇ ರೀತಿಯ ದುರ್ವಾಸನೆ ಬೀರಬಾರದು ಮತ್ತು ದುರ್ವಾಸನೆ ಬೀರಿ ಅಕ್ಕಪಕ್ಕದವರಿಗೆ ಉಪದ್ರವವಾದರೆ ಮತ್ತು ಅದು ಸಾಬೀತಾದರೆ ಕೋಳಿ ಸಾಕಾಣಿಕೆಯನ್ನು ನಿಲ್ಲಿಸತಕ್ಕದ್ದು ಎಂದು ಇರುತ್ತದೆ. ಈ ಪ್ರಸ್ತುತ ಪ್ರಕರಣದಲ್ಲಿ ದೂರುದಾರರು ಈ ರೀತಿ ಕೋಳಿ ಸಾಕಾಣಿಕೆಯಿಂದ ಪರಿಸರ ಹಾಳಾಗಿದೆ ಎಂದು ದೂರು ದಾಖಲಿಸಿದ್ದಾರೆ. ಆದರೆ ಆ ರೀತಿ ದುರ್ವಾಸನೆ ಬೀರಿ ಪರಿಸರ ಹಾಳಾಗಿದೆ ಎನ್ನುವ ಬಗ್ಗೆ ಸಾಬೀತುಪಡಿಸುವ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

11. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಸುತ್ತೋಲೆ No. PCB 744 COC 2015-16/4928, dated 03/12/2015 ರಂತೆ ಹೊಸದಾಗಿ ಕೋಳಿ ಸಾಕಾಣಿಕೆ ಮಾಡಬೇಕಾದರೆ ಇರುವ ಮಾರ್ಗಸೂಚಿಗಳು ಈ ಕೆಳಗಿನಂತೆ ಇರುತ್ತದೆ.

**Siting Criteria (For New Poultry Farms)**

(1) The poultry farm should not be located within

- 500 m from residential zone
- 200 m from major water course like River, Lake and Canals
- 500 m from any major drinking water reservoir on catchment side.
- 100 m from any drinking water source like wells, summer storage tanks, other tanks.
- 500 m from nearyby poultry, dairy or another livestock enterprises or industry.
- 150-200 m from National Highway (NH).
- 100 m from State Highway (SH).
- 10-15 m from rural roads/internal roads/village pagdandis

(2) The poultry sheds should not be located within

- 10 m from farm boundary

(3) The poultry sheds should be positioned

- On East to West direction
- At least 2 m above the water table
- At least 0.5 m above ground level

12. ಆದರೆ ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಶ್ರೀ ಭಾಸ್ಕರ್ ಪೂಜಾರಿ ರವರ ಕೋಳಿ ಫಾರಂ, ಪುತ್ತೂರು–ಉಪ್ಪಿನಂಗಡಿ ರಾಜ್ಯ ರಸ್ತೆಯಿಂದ 25 ಮೀಟರ್‌ಗಿಂತ ಕಡಿಮೆ ಅಂತರದಲ್ಲಿದೆ. ಸದರಿ ಕೋಳಿ ಫಾರಂ ಕಟ್ಟಡವು ದೂರುದಾರರ ಮನೆಯಿಂದ 30 ಮೀಟರ್ ಅಂತರದಲ್ಲಿದ್ದು, ಜನವಸತಿ ಪ್ರದೇಶದಲ್ಲಿ ಕೋಳಿ ಫಾರಂ ನಡೆಸುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಎದುರುದಾರರು ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಉದಾಸೀನ ತಳೆದಿದ್ದಾರೆಂದು ಆಪಾದಿಸಿದ್ದಾರೆ. 27/07/2012 ರಂದು ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಪರಿಸರ ಭವನ, ಬೈಕಂಪಾಡಿ, ಕೈಗಾರಿಕಾ ಪ್ರದೇಶ, ಮಂಗಳೂರು ರವರು ಶ್ರೀ ಭಾಸ್ಕರ್ ಪೂಜಾರಿ ರವರಿಗೆ ಕೋಳಿ ಫಾರಂ ನಡೆಸಲು Clearance ನೀಡುವ ಕಾಲಕ್ಕೆ 8 ಷರತ್ತುಗಳನ್ನು ಉಲ್ಲೇಖಿಸಿದ್ದು, ಈ ಮೇಲೆ ಉಲ್ಲೇಖಿಸಲಾಗಿದೆ, ಅದರ 7 ಮತ್ತು 8ನೇ ಷರತ್ತಿನ ಅನ್ವಯ ಕೋಳಿ ಸಾಕಾಣಿಕೆಯಿಂದ ಯಾವುದೇ ರೀತಿಯ ದುರ್ವಾಸನೆ ಬೀರಬಾರದು ಮತ್ತು ದುರ್ವಾಸನೆ ಬೀರಿ ಅಕ್ಕಪಕ್ಕದವರಿಗೆ ಉಪದ್ರವವಾದರೆ ಮತ್ತು ಅದು ಸಾಬೀತಾದರೆ ಕೋಳಿ ಸಾಕಾಣಿಕೆಯನ್ನು ನಿಲ್ಲಿಸತಕ್ಕದ್ದು ಎಂದು ಇರುತ್ತದೆ. ಆದ್ದರಿಂದ, ಸದರಿ ಅಂಶವು ಸಾಬೀತು ಪಡಿಸುವುದಕ್ಕಾಗಿ ದೂರುದಾರರು ಯಾವುದೇ ಪ್ರಾಧಿಕಾರದ ಸೂಕ್ತ ದಾಖಲೆಯನ್ನು ಒದಗಿಸದೇ ಇರುವುದರಿಂದ ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಪರಿಸರ ಭವನ, ಮಂಗಳೂರು ಇವರಿಗೆ ಸ್ಥಳ ಪರಿಶೀಲನೆ ಮಾಡಿ ಸ್ಪಷ್ಟ ವರದಿಯನ್ನು ಪಡೆಯುವುದು ಸೂಕ್ತವಾಗುತ್ತದೆ.

13. ಶ್ರೀ ಭಾಸ್ಕರ್ ಪೂಜಾರಿ ರವರ ಕೋಳಿ ಫಾರಂ, ಪುತ್ತೂರು–ಉಪ್ಪಿನಂಗಡಿ ರಾಜ್ಯ ರಸ್ತೆಯಿಂದ 25 ಮೀಟರ್‌ಗಿಂತ ಕಡಿಮೆ ಅಂತರದಲ್ಲಿದೆ ಹಾಗೂ ದೂರುದಾರರ ಮನೆಯಿಂದ 30 ಮೀಟರ್ ಅಂತರದಲ್ಲಿದ್ದು, ಜನವಸತಿ ಪ್ರದೇಶದಲ್ಲಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳುವುದಕ್ಕಾಗಿ ಹಾಗೂ

ಸದರಿ ಕೋಳಿ ಫಾರಂನಿಂದಾಗಿ ಸುತ್ತಮುತ್ತಲಿನ ಪರಿಸರ ಹಾಳಾಗಿ ಉಪದ್ರವ ಉಂಟಾಗುತ್ತಿದೆಯೇ ಎನ್ನುವ ಬಗ್ಗೆ ಖಚಿತ ಪಡಿಸಿಕೊಳ್ಳುವುದಕ್ಕಾಗಿ ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಪರಿಸರ ಭವನ, ಮಂಗಳೂರು ರವರಿಗೆ ಪತ್ರ ಬರೆದು ವರದಿ ಸಲ್ಲಿಸುವಂತೆ ತಿಳಿಸಲಾಗಿತ್ತು.

14. ಪತ್ರ ಸಂಖ್ಯೆ ಕ.ರಾ.ಮಾ.ನಿ.ಮಂ/ಲೋಕಾಯುಕ್ತ/ಎಂವೈಎಸ್-1568/2019-20/1504 ದಿನಾಂಕ 26.11.2019 ರ ಪತ್ರದಲ್ಲಿ ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ.ಮಂ ಮಂಗಳೂರು ದೂರಿಗೆ ಸಂಬಂಧಿಸಿದಂತೆ ತಮ್ಮ ಕಛೇರಿಯ ಉಪ ಪರಿಸರ ಅಧಿಕಾರಿಗಳು ಎದುರುದಾರರು ಹಾಗೂ ದೂರುದಾರರ ಜೊತೆಗೂಡಿ ದೂರಿನಲ್ಲಿ ತಿಳಿಸಿದ ಕೋಳಿ ಫಾರಂ ದೂರುದಾರರ ಮನೆ ಮತ್ತು ಸುತ್ತಮುತ್ತಲಿನ ಪ್ರದೇಶದ ಪರವೀಕ್ಷಣೆ ನಡೆಸಿ ಪರಿವೀಕ್ಷಣಾ ವರದಿಯನ್ನು ಸಲ್ಲಿಸಿರುತ್ತಾರೆಂದು ಮತ್ತು ಅದರ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಿದಾಗ, ದಿನಾಂಕ 20.11.2019 ರಂದು ದೂರುದಾರರು ಹಾಗೂ ಆರೋಗ್ಯಾಧಿಕಾರಿಗಳು, ಪುತ್ತೂರು ತಾಲ್ಲೂಕು, ಪಿ.ಡಿ.ಓ, ಕೋಡಿಂಬಾಡಿ ಗ್ರಾಮ ಪಂಚಾಯತಿ, ಶ್ರೀ ಮಂಜು ಆರ್. ಉಪ ಪರಿಸರ ಅಧಿಕಾರಿ, ಶ್ರೀ ವಿವೇಕ ಸಹಾಯಕ ಪರಿಸರ ಅಧಿಕಾರಿ, ಶ್ರೀ ರಮೇಶ್, ಕಾರ್ಯದರ್ಶಿ ಕೋಡಿಂಬಾಡಿ ಗ್ರಾಮ ಪಂಚಾಯತಿ ಹಾಗೂ ಶ್ರೀ ಬಾಸ್ಕರ್ ಪೂಜಾರಿ ಹಾಜರಾತಿಯಲ್ಲಿ ಪರಿಶೀಲನೆ ಮಾಡಿ ಕೆಳಕಂಡ ಅಂಶಗಳನ್ನು ಉಲ್ಲೇಖಿಸಿ ವರದಿ ನೀಡಿದ್ದಾರೆ. ಸದರಿ ವರದಿಯಲ್ಲಿಯ ಕೆಲವು ಅಂಶಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ.

(1) ದೂರಿನಲ್ಲಿ ಉಲ್ಲೇಖಿಸಲಾದ ಕೋಳಿ ಫಾರಂ ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ, ಕೋಡಿಂಬಾಡಿ ಗ್ರಾಮದ ಸರ್ವೆ ನಂಬ್ರ 88/1(ಪಿ1) ದಲ್ಲಿ ಸ್ಥಾಪಿಸಲ್ಪಟ್ಟು ಕಾರ್ಯಾಚರಣೆ ನಡೆಸುತ್ತಿರುತ್ತದೆ.

(2) ಸದರಿ ಕೋಳಿ ಫಾರಂ ಕೋಡಿಂಬಾಡಿ ಗ್ರಾಮದ ನಿವಾಸಿಯಾದ ಶ್ರೀ ಭಾಸ್ಕರ ಪೂಜಾರಿಯವರಿಗೆ ಸೇರಿದ್ದಾಗಿರುತ್ತದೆ ಮತ್ತು ಪ್ರಸ್ತಾಪಿತ ಕೋಳಿ ಫಾರಂನ್ನು ಅವರ ಮನೆಯ ಮುಂಭಾಗದ ಅವರಣದಲ್ಲಿಯೇ ಸ್ಥಾಪಿಸಿ ನಡೆಸುತ್ತಿರುತ್ತಾರೆ.

(3) ಸದರಿ ಕೋಳಿ ಫಾರಂ ಘಟಕವು ಒಟ್ಟು 1900 ಸಂಖ್ಯೆಯ ಕೋಳಿ ಸಾಕಾಣಿಕೆಯ ಸಾಮರ್ಥ್ಯ ಹೊಂದಿರುತ್ತದೆ ಮತ್ತು ಪರಿವೀಕ್ಷಣೆಯ ಸಂಧರ್ಭದಲ್ಲಿ ಯಾವುದೇ ಕೋಳಿಗಳು ಇರುವುದಿಲ್ಲ. ಕೋಳಿ ಫಾರಂ ಮಾಲಿಕರು ತಿಳಿಸಿದಂತೆ ದಿನಾಂಕ 16.11.2019 ರಂದು ಕೋಳಿಗಳ ಬ್ಯಾಚ್ ಮುಗಿದು ಕೋಳಿಗಳ ವಿಲೇ ಅಗಿರುತ್ತದೆ

ಮತ್ತು ಹೊಸದಾದ ಕೋಳಿಗಳ ಬ್ಯಾಚ್ ಇನ್ನೂ ಬರಬೇಕಾಗಿರುತ್ತದೆ ಎಂದು ತಿಳಿಸಿದರು.

(4) ಸದರಿ ಕೋಳಿ ಫಾರಂ ಘಟಕಕ್ಕೆ ಕೋಡಿಂಬಾಡಿ ಗ್ರಾಮ ಪಂಚಾಯತಿ ವತಿಯಿಂದ 24.02.2012 ರಂದು ಕಟ್ಟಡರಚನೆ : ಪುನರಚನೆ ಪರವಾನಿಗೆ ಪತ್ರ ಮತ್ತು 28.11.2016 ರಂದು ಉದ್ದಿಮೆಯ ಪರವಾನಿಗೆಯನ್ನು ಕೊನೆಯದಾಗಿ ನವೀಕರಣ ಮಾಡಲಾಗಿರುತ್ತದೆ ಮತ್ತು ಇದರ ಅವಧಿಯು ದಿನಾಂಕ 31.03.2017 ರಂದು ಮುಕ್ತಾಯವಾಗಿರುತ್ತದೆ (ಪ್ರತಿಯನ್ನು ಅನುಭಂಧ–4 ಮತ್ತು 5 ರಂತೆ ಲಗತ್ತಿಸಲಾಗಿದೆ).

(5) ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ತಿಳಿಸಿದಂತೆ ಸದರಿ ಸಾರ್ವಜನಿಕ ದೂರಿನ ಹಿನ್ನಲೆಯಲ್ಲಿ ಕೋಳಿ ಫಾರಂ ಘಟಕದ ಪರವಾನಿಗೆಯನ್ನು ನವೀಕರಣ ಮಾಡಿರುವುದಿಲ್ಲ.

(6) ಸದರಿ ಕೋಳಿ ಫಾರಂ ಘಟಕದಿಂದ ದೂರುದಾರರ ಮನೆ, ಉಪ್ಪಿನಂಗಡಿ–ಪುತ್ತೂರು ಮಾರ್ಗವನ್ನು ಅಳತೆ ಪಟ್ಟಿಯ ಸಹಾಯದಿಂದ ಅಳೆಯಲಾಗಿರುತ್ತದೆ ಮತ್ತು ಅವುಗಳ ಅಂತರ ಈ ಕೆಳಗಿನಂತಿದೆ:

(i) ಸದರಿ ಕೋಳಿ ಸಾಕಾಣಿಕಾ ಘಟಕದಿಂದ ದೂರುದಾರರ ಮನೆಯು ಸುಮಾರು 48.5 ಮೀಟರ್‌ಗಳ ಅಂತರದಲ್ಲಿರುತ್ತದೆ.

(ii) ಸದರಿ ಕೋಳಿ ಸಾಕಾಣಿಕಾ ಘಟಕದಿಂದ ಉಪ್ಪಿನಂಗಡಿ ಮತ್ತು ಪುತ್ತೂರು ಮಾರ್ಗವು 59.0 ಮೀಟರ್ ಅಂತರದಲ್ಲಿರುತ್ತದೆ.

(iii) ಸದರಿ ಕೋಳಿ ಸಾಕಾಣಿಕಾ ಘಟಕ 100 ಮೀಟರ್ ಸುತ್ತಳತೆಯಲ್ಲಿ ದೂರುದಾರರ ಮನೆ ಒಳಗೊಂಡಂತೆ ನಾಲ್ಕು ಚದುರಿದ ಮನೆಗಳು ಇರುತ್ತವೆ.

**ಟಿಪ್ಪಣಿ : ಸದರಿ ಕೋಳಿ ಸಾಕಾಣಿಕೆ ಘಟಕದ ಸ್ಥಳದ ಮಾಹಿತಿ ಮತ್ತು ದೂರಿಗೆ ಸಂಬಂಧಿಸಿದಂತೆ ವೈಮಾನಿಕ ಅಳತೆಗಳನ್ನು (ಗೂಗಲ್ ನಕ್ಷೆಯಂತೆ) ಅನುಭಂದ– ರಂತೆ ಲಗತ್ತಿಸಲಾಗಿದೆ:**

(1) ಸದರಿ ಕೋಳಿ ಸಾಕಣಿಕಾ ಘಟಕದಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ (ಸತ್ತ ಕೋಳಿ) ಗಳನ್ನು ಘಟಕದ ಆವರಣದಲ್ಲಿ ಒಂದು ಮಣ್ಣಿನ ಗುಂಡಿಯಲ್ಲಿ ವಿಲೇವಾರಿ ಮಾಡುತ್ತಿರುತ್ತಾರೆ ಹಾಗೂ ಕೋಳಿಗಳ ಹಿಕ್ಕೆ ಹಾಗೂ ವಿಸರ್ಜನೆಯಿಂದ ಉತ್ಪತ್ತಿಯಾಗುವ ತ್ಯಾಜ್ಯಗಳನ್ನು ಚೀಲಗಳಲ್ಲಿ ತುಂಬಿ ಗೊಬ್ಬರವಾಗಿ ವಿಲೇವಾರಿ ಮಾಡುತ್ತಿರುತ್ತಾರೆ.

(2) ಸದರಿ ಕೋಳಿ ಸಾಕಾಣಿಕಾ ಘಟಕದ ಸುತ್ತಲಿನ ಪರಿಸರದಲ್ಲಿ ಯಾವುದೇ ಮಾಲಿನ್ಯ ಕಾರಕ ಅಂಶಗಳು (ಅವೈಜ್ಞಾನಿಕ ರೀತಿಯ ತ್ಯಾಜ್ಯ ವಿಲೇವಾರಿ) ಕಂಡುಬಂದಿರುವುದಿಲ್ಲ.

(3) ದೂರುದಾರರು ಪರಿವೀಕ್ಷಣಾ ಸಂದರ್ಭದಲ್ಲಿ ಮುಖ್ಯವಾಗಿ ಪ್ರಸ್ತಾಪಿತ ಕೋಳಿ ಫಾರಂ ಘಟಕದಿಂದ ಬರುವ ದುರ್ವಾಸನೆಯ ಬಗ್ಗೆ ಆಕ್ಷೇಪಿಸಿರುತ್ತಾರೆ ಮತ್ತು ಕೋಳಿ ಸಾಕಾಣಿಕಾ ಕೇಂದ್ರದಲ್ಲಿ ಮುಖ್ಯವಾಗಿ ವಾಸನೆಗೆ ಕಾರಣವಾಗುವ ಕೋಳಿಗಳ ತ್ಯಾಜ್ಯ (ಹಿಕ್ಕೆ ಮತ್ತು ವಿಸರ್ಜನೆ) ವನ್ನು ಸುಮಾರು 45 ದಿನಕ್ಕೊಮ್ಮೆ ) ಪ್ರತಿ ಕೋಳಿಗಳ ಬ್ಯಾಚ್ ಬದಲಿಸಿದಾಗ) ತೆಗೆದು ಚೀಲಗಳಲ್ಲಿ ತುಂಬಿಸಿ ಗೊಬ್ಬರವಾಗಿ ಮಾರಲಾಗುತ್ತದೆ ಎಂದು ತಿಳಿದುಬಂದಿರುತ್ತದೆ.

15. ಒಟ್ಟಾರೆಯಾಗಿ ಸದರಿ ವರದಿಯಿಂದ ಕಂಡು ಬರುವುದೇನೆಂದರೆ, ಸದರಿ ಕೋಳಿ ಸಾಕಾಣಿಕಾ ಘಟಕ 1900 ಕೋಳಿಗಳ ಸಾಮರ್ಥ್ಯದ ಸಣ್ಣ ಘಟಕವಾಗಿದೆ. ಕೋಳಿಗಳ ತ್ಯಾಜ್ಯ (ಹಿಕ್ಕೆ ಮತ್ತು ವಿಸರ್ಜನೆ) ಪರಿಸರದಲ್ಲಿ ವಾಸನೆಗೆ ಮುಖ್ಯ ಕಾರಣವಾಗುವ ಸಾಧ್ಯತೆ ಇದೆಯೆಂದು ಉಲ್ಲೇಖಿಸಲಾಗಿದೆ.

16. ದೂರುದಾರರು ಆಪಾದಿಸಿದಂತೆ ಸದರಿ ಕೋಳಿ ಸಾಕಾಣಿಕೆ ಘಟಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಂ. ಪಿಸಿಬಿ 744 ಸಿಓಸಿ 2015-16/4928 ದಿನಾಂಕ 03.12.2015 ರ ಸುತ್ತೋಲೆಯ ಮಾರ್ಗಸೂಚಿಯನ್ನು ಸಂಪೂರ್ಣವಾಗಿ ಪಾಲನೆ ಮಾಡಿಲ್ಲ ಅಂತಾ ಕಂಡು ಬರುತ್ತದೆ. ಮೇಲೆ ಉಲ್ಲೇಖಿಸಿರುವ ವರದಿಯಲ್ಲಿಯೇ, ಸದರಿ ಕೋಳಿ ಸಾಕಾಣಿಕಾ ಘಟಕದಿಂದ ದೂರುದಾರರ ಮನೆಯು ಸುಮಾರು 48.5 ಮೀಟರ್‌ಗಳ ಅಂತರದಲ್ಲಿರುತ್ತದೆ ಹಾಗೂ ಸದರಿ ಕೋಳಿ ಸಾಕಾಣಿಕಾ ಘಟಕದಿಂದ ಉಪ್ಪಿನಂಗಡಿ ಮತ್ತು ಪುತ್ತೂರು ಮಾರ್ಗವು 59.0 ಮೀಟರ್ ಅಂತರದಲ್ಲಿರುತ್ತದೆ ಮತ್ತು ಸದರಿ ಕೋಳಿ ಸಾಕಾಣಿಕಾ ಘಟಕ 100 ಮೀಟರ್ ಸುತ್ತಳತೆಯಲ್ಲಿ ದೂರುದಾರರ ಮನೆ ಒಳಗೊಂಡಂತೆ ನಾಲ್ಕು ಚದುರಿದ ಮನೆಗಳು ಇರುತ್ತವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

17. ದಿನಾಂಕ 27.07.2012 ರಂದು ಪರಿಸರ ಅಧಿಕಾರಿಗಳು ನಿರಾಪೇಕ್ಷಣಾ ಪತ್ರವನ್ನು ನೀಡುವಾಗ ಈ ಕೆಳಗೆ ಉಲ್ಲೇಖಿಸಿರುವ ಷರತ್ತುಗಳನ್ನು ಪಾಲನೆ ಮಾಡುವುದು ಶ್ರೀ ಬಾಸ್ಕರ್ ಪೂಜಾರಿ ಕರ್ತವ್ಯವಾಗಿತ್ತು. ಸದರಿ ಷರತ್ತುಗಳಾದ:-

1. There shall not be any smell nuisance from the poultry activity.
2. If any complaint received from neighbors against smell nuisance and it is in proven, then the applicant shall stop poultry activity.

18. ಮೇಲೆ ಉಲ್ಲೇಖಿಸಿರುವ ಷರತ್ತುಗಳನ್ನು ಪರಿಶೀಲಿಸಲಾಗಿ, ಕೋಳಿ ಸಾಕಾಣಿಕೆಯಿಂದ ಯಾವುದೇ ರೀತಿಯ ದುರ್ವಾಸನೆ ಬೀರಬಾರದು ಮತ್ತು ದುರ್ವಾಸನೆ ಬೀರಿ ಅಕ್ಕಪಕ್ಕದವರಿಗೆ ಉಪದ್ರವವಾದರೆ ಮತ್ತು ಅದು ಸಾಬೀತಾದರೆ ಕೋಳಿ ಸಾಕಾಣಿಕೆಯನ್ನು ನಿಲ್ಲಿಸತಕ್ಕದ್ದು ಎಂದು ಇರುತ್ತದೆ. ದಿನಾಂಕ 20.11.2019 ರಂದು ಸ್ಥಳ ತನಿಖೆ ಮಾಡುವ ಕಾಲಕ್ಕೆ ಉಪ ಪರಿಸರ ಅಧಿಕಾರಿಯವರು ಕೋಳಿಗಳ ತ್ಯಾಜ್ಯ (ಹಿಕ್ಕೆ ಮತ್ತು ವಿಸರ್ಜನೆ) ಪರಿಸರದಲ್ಲಿ ವಾಸನೆಗೆ ಮುಖ್ಯ ಕಾರಣವಾಗುವ ಸಾಧ್ಯತೆ ಇದೆಯೆಂದು ಉಲ್ಲೇಖಿಸಲಾಗಿದೆ.

19. ಅದು ಅಲ್ಲದೆ, ಶ್ರೀ ಭಾಸ್ಕರ್ ಪೂಜಾರಿಯವರ ಕೋಳಿ ಸಾಕಾಣಿಕಾ ಘಟಕ ತೆರೆಯುವಾಗ ಇರಬೇಕಾದ ಮತ್ತು ಪಾಲಿಸಬೇಕಾದ ಪ್ರಮುಖ ಷರತ್ತುಗಳ ಅಂದರೆ ಜನ ವಸತಿಯ ಪ್ರದೇಶದಿಂದ 500 ಮೀಟರ್ ಅಂತರದೊಳಗೆ ಕೋಳಿ ಸಾಕಾಣಿಕಾ ಘಟಕ ಇರಬಾರದು ಎಂಬ ನಿಯಮವನ್ನು ಶ್ರೀ ಭಾಸ್ಕರ್ ಪೂಜಾರಿ ರವರು ಉಲ್ಲಂಘನೆ ಮಾಡಿದ್ದಾರೆಂದು ದೂರುದಾರರು ಪ್ರತಿವಾದಿಸಿದ್ದಾರೆ. ಆದರೆ, ಜನ ವಸತಿ ಪ್ರದೇಶ 500 ಮೀಟರ್ ಎಂಬುದು ಎಲ್ಲಿಂದ ಪ್ರಾರಂಭವಾಗುತ್ತದೆ ಎಂಬುದನ್ನು ದೂರುದಾರರು ಸ್ಪಷ್ಟಪಡಿಸಿಲ್ಲ. ಅದು ಅಲ್ಲದೇ, ದಿನಾಂಕ: 26/11/2019ರ ಪರಿಸರ ಅಧಿಕಾರಿಗಳು ನೀಡಿರುವ ವರದಿಯಲ್ಲಿ ದೂರುದಾರರ ಮನೆ ಕೋಳಿ ಸಾಕಾಣಿಕೆ ಘಟಕದಿಂದ 48.5 ಮೀಟರ್ ಅಂತರದಲ್ಲಿದೆ ಎಂದು ತಿಳಿಸಿರುತ್ತಾರೆ. ಕೇವಲ ದೂರುದಾರರ ಒಂದೇ ಮನೆ ಅಥವಾ ಸುತ್ತಮುತ್ತಲಿನ ಪ್ರದೇಶದ ನಾಲ್ಕಾರು ಮನೆಗಳು ಇರುವ ಪ್ರದೇಶ ವಸತಿ ವಲಯ (Residential Zone) ಅಂತಾ ಪರಿಗಣಿಸಲು ದೂರುದಾರರು ಸೂಕ್ತ ದಾಖಲೆಗಳನ್ನು ಒದಗಿಸಿಲ್ಲ. ಆದರೆ, ರಾಜ್ಯ ರಸ್ತೆಯಾದ ಪುತ್ತೂರು–ಉಪ್ಪಿನಂಗಡಿ ಮಾರ್ಗದಿಂದ 59.0 ಮೀಟರ್ ಅಂತರದಲ್ಲಿದೆ ಎಂದು ಪರಿಸರ ಅಧಿಕಾರಿಗಳು ತಮ್ಮ ವರದಿಯಲ್ಲಿ ಉಲ್ಲೇಖಿಸಿರುವುದರಿಂದ, ಅದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಂ. ಪಿಸಿಬಿ 744 ಸಿಓಸಿ 2015–16/4928, ದಿನಾಂಕ: 03/12/2015ರ ಸುತ್ತೋಲೆಯ Siting Criteria' (For New Poultry Farms) 100 Meter from State Highway ಎಂಬ ಷರತ್ತಿನ ಉಲ್ಲಂಘನೆಯಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

20. ದಿನಾಂಕ 31/03/2017 ರಂದು ಶ್ರೀ ಬಾಸ್ಕರ್ ಪೂಜಾರಿಯವರು ಕೋಳಿ ಸಾಕಾಣಿಕಾ ಘಟಕದ ಪರವಾನಗಿ ಮುಗಿದಿದ್ದೂ ತದನಂತರ ನವೀಕರಣ ಮಾಡಿಲ್ಲ ಎಂಬುದು ದಾಖಲೆಗಳಿಂದ ಮೇಲ್ನೋಟಕ್ಕೆ ಕಂಡುಬರುತ್ತದೆ. ಈಗ ಪುನ: ಸದರಿ ಕೋಳಿ ಸಾಕಾಣಿಕಾ ಘಟಕದ ಪರವಾನಗೆ

ನೀಡುವಂತೆ ಆದೇಶಿಸಿದರೆ ಸದರಿ ಪರಿಸರದಲ್ಲಿ ಕೋಳಿಗಳ ತ್ಯಾಜ್ಯ (ಹಿಕ್ಕೆ ಮತ್ತು ವಿಸರ್ಜನೆ) ದುರ್ವಾಸನೆ ಬೀರಿ ಪರಿಸರದ ವಾಸಿಗಳಿಗೆ ಉಪದ್ರವ ಉಂಟಾಗುವ ಸಾಧ್ಯತೆ ಇರುತ್ತದೆ. ಅದೂ ಅಲ್ಲದೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಂ. ಪಿಸಿಬಿ 744 ಸಿಓಸಿ 2015–16/4928 ದಿನಾಂಕ 03/12/2015ರ ಸುತ್ತೋಲೆಯ ಮಾರ್ಗಸೂಚಿಯ ಷರತ್ತುಗಳ ಉಲ್ಲಂಘನೆಯಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

21. ಮೇಲೆ ಉಲ್ಲೇಖಿಸಿರುವ ಕಾರಣಗಳು ಹಾಗೂ ಶ್ರೀ ಭಾಸ್ಕರ್ ಪೂಜಾರಿಯವರು ಕೋಳಿ ಸಾಕಾಣಿಕಾ ಘಟಕ ನಿರ್ವಹಣೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಂ. ಪಿಸಿಬಿ 744 ಸಿಓಸಿ 2015–16/4928 ದಿನಾಂಕ: 03/12/2015ರ ಸುತ್ತೋಲೆಯ ಮಾರ್ಗಸೂಚಿಯ ಷರತ್ತನ್ನು ಉಲ್ಲಂಘನೆ ಮಾಡಿದ್ದರಿಂದ ಹಾಗೂ ಪರಿಸರದಲ್ಲಿ ಕೋಳಿಗಳ ತ್ಯಾಜ್ಯ (ಹಿಕ್ಕೆ ಮತ್ತು ವಿಸರ್ಜನೆ) ದುರ್ವಾಸನೆ ಬೀರಿ ಪರಿಸರದ ವಾಸಿಗಳಿಗೆ ಉಪದ್ರವ ಉಂಟಾಗುವ ಸಾಧ್ಯತೆ ಇರುತ್ತದೆ ಎನ್ನುವ ವರದಿಯನ್ನು ಪರಿಸರ ಅಧಿಕಾರಿಗಳು ನೀಡಿರುವುದರಿಂದ ಮೇಲ್ನೋಟಕ್ಕೆ ಸದರಿಯವರ ಕೋಳಿ ಸಾಕಾಣಿಕೆ ಘಟಕವನ್ನು, ಅದರ ಮಾಲೀಕರಾದ ಶ್ರೀ ಭಾಸ್ಕರ್ ಪೂಜಾರಿ ರವರಿಗೆ ನೋಟಿಸ್ ಜಾರಿ ಮಾಡಿ ಕಾನೂನಿನ ಪ್ರಕಾರ ಅವರ ವಿರುದ್ಧ ಕ್ರಮ ಜರುಗಿಸುವಂತೆ ನಿರ್ದೇಶಿಸಿ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

22. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

31-1-20

**[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**